ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಬೆವಿಕಂ/ನಿ(ಹ)ಪ್ರವ್ಯ(ಕಂ)/ಉಪ್ರವ್ಯ(ಕಂ)/ಸಪ್ರವ್ಯ(ಕಂ-1)/2202(42)/2021-22
ಲಗತ್ತು: ಸರ್ಕಾರದ ಆದೇಶ

CYS-04

ಕಂಪನಿ ಕಾರ್ಯಾಲಯ
ಕೆ.ಆರ್.ವೃತ್ತ, ಬೆಂಗಳೂರು-1
ದಿನಾಂಕ: 16 AUG 2021

# ಸುತ್ತೋಲೆ

**ವಿಷಯ:** ಆರ್ಥಿಕ ವರ್ಷ 2021-22 ನೇ ಸಾಲಿನ ಏಪ್ರಿಲ್-2021 ರಿಂದ ಜೂನ್-2021 ರ ಮಾಹೆಗಳಲ್ಲಿ ಹೋಟಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳ ಸ್ಥಾವರಗಳ ವಿದ್ಯುತ್ ಬಿಲ್ಲುಗಳಲ್ಲಿನ ಬೇಡಿಕೆ/ನಿಗಧಿತ ಶುಲ್ಕವನ್ನು ಮನ್ನಾ ಮಾಡುವ ಬಗ್ಗೆ.

**ಉಲ್ಲೇಖ:** ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 295 ಪಿಎಸ್ಆರ್ 2021 ಬೆಂಗಳೂರು, ದಿನಾಂಕ: 04.08.2021.

*******

ಘನ ಕರ್ನಾಟಕ ಸರ್ಕಾರವು, ಕರ್ನಾಟಕ ಟೂರಿಸಂ ಟ್ರೇಡ್ ಫೆಸಿಲಿಟೇಶನ್(ಕೆ.ಟಿ.ಟಿ.ಎಫ್) ಕಾಯ್ದೆ ಅನ್ವಯ **ಪ್ರವಾಸೋದ್ಯಮ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ರಾಜ್ಯದ ಹೋಟಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳೆಂದು(Amusement Parks) ಪ್ರಾಧಿಕಾರದಿಂದ ಆದಾರವುಳ್ಳ ಪ್ರಮಾಣ ಪತ್ರ/ಪರವಾನಗಿಯನ್ನು ಹೊಂದಿರುವ (ಕೆ.ಟಿ.ಟಿ.ಎಫ್ ಕಾಯ್ದೆ 8/1 ರನ್ವಯ ಪ್ರವಾಸೋದ್ಯಮ ಇಲಾಖೆಯ ವೆಬ್‌ಸೈಟ್‌ನಲ್ಲಿ ನೋಂದಣಿಯಾದ ಸದಸ್ಯರಿಗೆ**) ವಿದ್ಯುತ್ ಗ್ರಾಹಕರಿಗೆ **ಏಪ್ರಿಲ್ 2021 ರಿಂದ ಜುಲೈ 2021** ರ ಮಾಹೆಗಳ ವಿದ್ಯುತ್ ಬಿಲ್ಲಿನ ಬೇಡಿಕೆ/ನಿಗಧಿತ ಶುಲ್ಕಗಳನ್ನು ಪಾವತಿಸುವುದರಿಂದ ವಿನಾಯಿತಿಯನ್ನು ಘೋಷಣೆ ಮಾಡಿರುತ್ತದೆ. ಸದರಿ ರಿಯಾಯಿತಿ/ಸೌಲಭ್ಯಯನ್ನು ವಿದ್ಯುತ್ ಗ್ರಾಹಕರುಗಳಿಗೆ ಒದಗಿಸಲು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು:

- ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳ ವಿದ್ಯುತ್ ಸ್ಥಾವರವು ಹಾಲಿ ಚಾಲ್ತಿಯಲ್ಲಿದ್ದು ಹಾಗೂ ದಿನಾಂಕ: 31.03.2021 ರ ಅಂತ್ಯಕ್ಕೆ ವಿದ್ಯುತ್ ಬಾಕಿ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿರಬೇಕು.
- ಈ ಪ್ರವರ್ಗದ ಗ್ರಾಹಕರುಗಳಿಗೆ ಈ ಅದಧಿಯಲ್ಲಿ (ಏಪ್ರಿಲ್ -21 ರಿಂದ ಜೂನ್ -21 ರವರೆಗೆ) ಈಗಾಗಲೇ ವಿದ್ಯುತ್ ಬಿಲ್ಲುಗಳನ್ನು ಪಾವತಿಸಿದ್ದರೆ ಅಂತಹ ಗ್ರಾಹಕರ ವಿದ್ಯುತ್ ಬಿಲ್ಲಿನ ಕನಿಷ್ಠ ಬೇಡಿಕೆ / ನಿಗದಿತ ಶುಲ್ಕವನ್ನು (Demand Charge/Fixed charge) ಮುಂದಿನ ಮಾಹೆಯ ಬಿಲ್ಲುಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳವುದು.
- ಕೆ.ಟಿ.ಟಿ.ಎಫ್ ಕಾಯ್ದೆ 8/1 ರನ್ವಯ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸತಕ್ಕದ್ದು. ಈ ಸಂಬಂಧ, ವೆಬ್‌ಸೈಟ್‌ನಲ್ಲಿ ನೋಂದಣಿಯಾದ ಸದಸ್ಯರಿಗೆ ಸದರಿ ರಿಯಾಯಿತಿ ನೀಡುವುದು.
- ಕೆ.ಟಿ.ಟಿ.ಎಫ್ ಕಾಯ್ದೆ ಪ್ರಕಾರ ವಿದ್ಯುತ್ ಬಿಲ್ಲಿನ ಕನಿಷ್ಠ ಬೇಡಿಕೆ / ನಿಗದಿತ ಶುಲ್ಕವನ್ನು((Demand Charge/Fixed charge) ಮನ್ನಾ ಮಾಡಲು ಈ ಆದೇಶಕ್ಕೆ ಲಗತ್ತಿಸಿರುವ ಹಾಗೂ ಸರ್ಕಾರ ಸೂಚಿಸಿರುವ ಅರ್ಜಿ ನಮೂನೆಯಲ್ಲಿ ಪೂರ್ಣ ಮಾಹಿತಿಯೊಂದಿಗೆ ಸಂಬಂಧಿಸಿದ ಉಪವಿಭಾಗಕ್ಕೆ ಸಲ್ಲಿಸುವುದು. ಸಂಬಂಧಿಸಿದ ಉಪವಿಭಾಗಳಲ್ಲಿ ಅರ್ಜಿದಾರರು ಒದಗಿಸಿರುವ ಮಾಹಿತಿಯ ವಿವರಗಳನ್ನು ಪರಿಶೀಲಿಸುವುದು.

- ಅರ್ಹ ಫಲಾನುಭವಿ ಗ್ರಾಹಕರಿಗೆ ಬೇಡಿಕೆ/ನಿಗಧಿತ ಶುಲ್ಕವನ್ನು RAPDRP ಮತ್ತು TRM ತಂತ್ರಾಂಶದಲ್ಲಿ ಹೊಸದಾಗಿ ರಚಿಸಿರುವ **"Waiveoff on Demand/Fixed Charges for Hotels/resorts/Restaurants under Tourism Department"** ಹೊಂದಾಣಿಕೆಯನ್ನು ಆಯ್ಕೆ ಮಾಡಿ ಮನ್ನಾ ಮಾಡಬೇಕಿರುವ ಬೇಡಿಕೆ/ನಿಗಧಿತ ಶುಲ್ಕ ಮೊತ್ತವನ್ನು ನಮೂದಿಸಿ ಹೊಂದಾಣಿಕೆ ನೀಡುವುದು. **ಪ್ರತಿ ತಿಂಗಳು ಪ್ರತ್ಯೇಕ ಹೊಂದಾಣಿಕೆ ನೀಡತಕ್ಕದ್ದು.**
- ಸದರಿ ಗ್ರಾಹಕರಿಗೆ ನೀಡಲಾಗುವ ಬೇಡಿಕೆ/ನಿಗಧಿತ ಶುಲ್ಕದ ಹೊಂದಾಣಿಕೆಯು ಡಿ.ಸಿ.ಬಿ. ವರದಿಯ ವಸೂಲಾತಿ ಅಂಕಣದಲ್ಲಿ ಹೊಂದಾಣಿಕೆಯಡಿಯಲ್ಲಿ ಬರುವುದರಿಂದ, ಇದನ್ನು ತಿಂಗಳ ಕೊನೆಯಲ್ಲಿ ಸೂಕ್ತ ಪರಿಶೀಲನೆ ನಡೆಸಿ ಡಿಸಿಬಿ ಮೊತ್ತಕ್ಕೆ ತಾಳೆ ಮಾಡುವುದು ಮತ್ತು ಲೆಕ್ಕ ಶೀರ್ಷಿಕೆ **" 79.8867 "** ರಲ್ಲಿ ಲೆಕ್ಕೀಕರಿಸುವುದು.
- ವಿದ್ಯುತ್ ಬಿಲ್ಲಿನ ಕನಿಷ್ಠ ಬೇಡಿಕೆ / ನಿಗದಿತ ಶುಲ್ಕವನ್ನು((Demand Charge/Fixed charge)ಮನ್ನಾ ಮಾಡಿದ ಮೊತ್ತವನ್ನು ಸರ್ಕಾರದಿಂದ ಭರಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಪ್ರವಾಸೋದ್ಯಮ ಇಲಾಖೆಯ ಮುಖಾಂತರ ಸಲ್ಲಿಸಬೇಕಾಗಿರುವುದರಿಂದ ರಿಯಾಯಿತಿ ಪಡೆದ ಗ್ರಾಹಕರ ವಿವರಗಳನ್ನು ಉಪವಿಭಾಗಗಳಿಂದ ಪ್ರತಿ ಮಾಹೆ 5 ನೇ ತಾರಿಖಿನೊಳಗೆ ನಿಗಧಿತ ನಮೂನೆಯಲ್ಲಿ ಪಡೆದು ಕ್ರೋಢೀಕರಿಸಿ ಲೆಕ್ಕಾಧಿಕಾರಿ (ಆಂ.ಪ) ರವರಿಂದ ದೃಢೀಕರಣ ಪಡೆದು ವಿಭಾಗೀಯ ಕಚೇರಿಯಿಂದ ಪ್ರಧಾನ ವ್ಯವಸ್ಥಾಪಕರು(ಕಂದಾಯ), ನಿಗಮ ಕಛೇರಿ ರವರಿಗೆ 10ನೇ ತಾರೀಖಿನೊಳಗೆ ತಪ್ಪದೇ ಸಲ್ಲಿಸುವುದು.
- ಹೊಂದಾಣಿಕೆ ವಿವರಗಳನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

**ಡಾ॥ ಆರ್.ಸಿ. ಚೇತನ್ IRS**
**ನಿರ್ದೇಶಕರು (ಹಣಕಾಸು)**

ಪ್ರತಿ:

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ) ಬೆವಿಕಂ, ನಿಗಮ ಕಾರ್ಯಾಲಯ ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ.
2. ಮುಖ್ಯ ಇಂಜಿನಿಯರ್(ವಿ)/ಲೆಕ್ಕನಿಯಂತ್ರಣಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ಬೆಂ.ಮ.ಕ್ಷೇ ಉತ್ತರ/ದಕ್ಷಿಣ/ಬೆಂ.ಗ್ರಾ.ಕ್ಷೇ/ಚಿ.ಕ್ಷೇ ವಲಯ ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಪ್ರಧಾನ ವ್ಯವಸ್ಥಾಪಕರು (ಲೆ ಮತ್ತು ಜ) ಬೆವಿಕಂ, ನಿಗಮ ಕಾರ್ಯಾಲಯ ರವರ ಮಾಹಿತಿಗಾಗಿ ಹಾಗೂ ಲೆಕ್ಕೀಕರಿಸುವ ವಿಧಾನವನ್ನು ಕ್ಷೇತ್ರಾಧಿಕಾರಿಗಳಿಗೆ ಒದಗಿಸುವುದು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ವೃತ್ತ ಇವರಿಗೆ ಸೂಕ್ತ ಕ್ರಮಕ್ಕಾಗಿ
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ
6. ಎಲ್ಲಾ ವಿಭಾಗೀಯ ಲೆಕ್ಕಾಧಿಕಾರಿ(ಆಂ.ಪ) ಶಾಖೆ, ಬೆವಿಕಂ ರವರ ಸೂಕ್ತ ಕ್ರಮಕ್ಕಾಗಿ
7. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಸಹಾಯಕ ಲೆಕ್ಕಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ಉಪ-ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ.
8. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ) ಇವರ ಆಪ್ತ ಕಾರ್ಯದರ್ಶಿಗಳು ಬೆವಿಕಂ, ನಿಗಮ ಕಾರ್ಯಾಲಯ.
9. ಮಹಾಕಡತ/ಕಡತ

# ಅರ್ಜಿ ನಮೂನೆ

2021–22ನೇ ಆರ್ಥಿಕ ವರ್ಷದಲ್ಲಿ ಏಪ್ರಿಲ್–2021 ರಿಂದ ಜೂನ್–21ರವರೆಗಿನ ಮಾಹೆಗಳ ವಿದ್ಯುತ್ ಬಿಲ್ಲಿನ ಬೇಡಿಕೆ / ನಿಗದಿತ ಶುಲ್ಕವನ್ನು ಮನ್ನಾ ಮಾಡಲು ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳು ಸಲ್ಲಿಸಬೇಕಾದ ಅರ್ಜಿ ನಮೂನೆ:

| | | |
|---|---|---|
| 1. | ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳ ಮಾಲೀಕರ ಹೆಸರು. | |
| 2. | ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳ ಹೆಸರು, ಸಂಪೂರ್ಣ ವಿಳಾಸ ಮತ್ತು ದೂರವಾಣಿ ಸಂಖ್ಯೆ. | |
| 3. | ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳು ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾವಣೆ ಆಗಿರುವ ಬಗ್ಗೆ ಮಾಹಿತಿ. | |
| 4. | ವಿದ್ಯುತ್ ಸ್ಥಾವರದ ಸಂಖ್ಯೆ, ಮಾಸಿಕ ವಿದ್ಯುತ್ ಬೇಡಿಕೆ / ನಿಗದಿತ ಶುಲ್ಕ, ಜಕಾತಿ, ದಿನಾಂಕ: 31.03.2021ರ ಅಂತ್ಯಕ್ಕಿರುವ ವಿದ್ಯುತ್ ಬಾಕಿ ಶುಲ್ಕ, ಇತರೆ ವಿವರಗಳು. | |
| 5. | ವಿದ್ಯುತ್ ಬೇಡಿಕೆ / ನಿಗದಿತ ಶುಲ್ಕವನ್ನು ಮನ್ನಾ ಮಾಡಲು ಕೋರಿರುವ ಅವಧಿ ಮತ್ತು ಒಟ್ಟು ಮೊತ್ತ. | |
| 6. | ಈ ಅವಧಿಯಲ್ಲಿ ಈಗಾಗಲೇ ಪಾವತಿಸಿರುವ ವಿದ್ಯುತ್ ಬೇಡಿಕೆ / ನಿಗದಿತ ಶುಲ್ಕದ ವಿವರಗಳ ಮಾಹಿತಿ / ದಾಖಲೆಗಳನ್ನು ಒದಗಿಸುವುದು. | |
| 7. | ಈಗಾಗಲೇ ಪಾವತಿಸಿರುವ ವಿದ್ಯುತ್ ಬೇಡಿಕೆ / ನಿಗದಿತ ಶುಲ್ಕದ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಲು ಕೋರುತ್ತಿರುವ ಅವಧಿ. | |
| 8. | ಇತರೆ ಮಾಹಿತಿಗಳು. | |

ಅರ್ಜಿದಾರರ ಸಹಿ

## ಸ್ವೀಕೃತಿ

2021–22ನೇ ಆರ್ಥಿಕ ವರ್ಷದಲ್ಲಿ ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳ ಏಪ್ರಿಲ್–2021 ರಿಂದ ಜೂನ್–21ರವರೆಗಿನ ಮಾಹೆಗಳ ವಿದ್ಯುತ್ ಬಿಲ್ಲಿನ ಬೇಡಿಕೆ / ನಿಗದಿತ ಶುಲ್ಕವನ್ನು ಮನ್ನಾ ಮಾಡಲು ---------ರವರಿಂದ ಅರ್ಜಿ ಸ್ವೀಕರಿಸಿದೆ.

ದಿನಾಂಕ: ಸಹಿ